**ಕರ್ನಾಟಕ ಸರ್ಕಾರ**
**ತೋಟಗಾರಿಕೆ ಇಲಾಖೆ**

**ಸಂಖ್ಯೆ:ಹಿಸತೋನಿ(ಜಿಪಂ)/ರಾ/ಸತೋಅ-1/1/2017-18**

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು**
**ರವರ ಕಛೇರಿ (ಜಿಪಂ) ರಾಮದುರ್ಗ ತಾಲ್ಲೂಕು**
**ಬೆಳಗಾವಿ ಜಿಲ್ಲೆ.-591123 ದಿನಾಂಕ:10-01-2018**

**<u>ಕಛೇರಿ ಟಿಪ್ಪಣಿ ಮಂಡಿಸಿದೆ</u>**

**ವಿಷಯ:-** ಮಾಹಿತಿ ಹಕ್ಕು ಅಧಿನಿಯಮ, 2005 ರ ಸೆಕ್ಷನ್ ಅಡಿ 4(1)ಎ ಮತ್ತು 4(1)ಬಿರ 2016-17ನೇ ಸಾಲಿನ ಅನುಷ್ಠಾನದ ವಿವರಗಳನ್ನು ವರಧಿ ಮಾಡುವ ಬಗ್ಗೆ ಹಾಗೂ ಮಾಹಿತಿಯನ್ನು ವೆಬ್‌ಸೈಟ್ ನಲ್ಲಿ ಪ್ರಕಟಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾಹಿತಿ ಹಕ್ಕು ಅಧಿನಿಯಮ, 2005 ರ ಸೆಕ್ಷನ್ ಅಡಿ 4(1)ಎ ಮತ್ತು 4(1)ಬಿ ರ 2016-17ನೇ ಸಾಲಿನಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ರಾಮದುರ್ಗ ರವರ ಕಛೇರಿಯ ಅನುಷ್ಠಾನದ ವಿವರಗಳನ್ನು ನಿಗದಿತ ನಮೂನೆಯಲ್ಲಿ ತಯಾರಿಸಿ ತಮ್ಮ ಅವಗಾಹನೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ಮುಂದುವರೆದು ಸದರಿ ಮಾಹಿತಿಯನ್ನು ವೆಬ್‌ಸೈಟ್ ನಲ್ಲಿ ಪ್ರಕಟಿಸಲು Soft copy ಯನ್ನು ಇ-ಮೇಲ್ ಮೂಲಕ ಕಳುಹಿಸಲಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.

**ತಮ್ಮ ವಿಶ್ವಾಸಿ**

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು**
**(ಜಿಪಂ) ರಾಮದುರ್ಗ**

**ರವರಿಗೆ,**
ಮಾನ್ಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)
ಬೆಳಗಾವಿ ಜಿಲ್ಲೆ
ಬೆಳಗಾವಿ

**ಪ್ರತಿಯನ್ನು:**
1. ಕಛೇರಿ ಪ್ರತಿ.

**ಸಾಮಾನ್ಯ ಮಾಹಿತಿ**

**ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ) ಕಚೇರಿಯಿಂದ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ), ರಾಮದುರ್ಗ ರವರ ಕಚೇರಿಗೆ ಇರುವ ದೂರ: 113 ಕಿ.ಮೀ.**

1. ರಾಮದುರ್ಗ ತಾಲೂಕಿನ ಪೂರ್ವ ದಿಕ್ಕಿನಲ್ಲಿ ಬದಾಮಿ ದಕ್ಷಿಣ ದಿಕ್ಕಿನಲ್ಲಿ ಸವದತ್ತಿ ತಾಲೂಕು, ಪಶ್ಚಿಮಕ್ಕೆ ಬೆಳಗಾವಿ ತಾಲೂಕು ಉತ್ತರಕ್ಕೆ ಮುದೋಳ ತಾಲೂಕುಗಳು ಇರುತ್ತವೆ.
2. ರಾಮದುರ್ಗ ತಾಲೂಕಿನಲ್ಲಿ ಒಟ್ಟು ನಾಲ್ಕು ಹೋಬಳಿಗಳಿದ್ದು ಅವುಗಳೆಂದರೆ ಸುರೇಬಾನ ಮುದಕವಿ ಚಂದರಗಿ ಮತ್ತು ಕಟಕೋಳ ಈ ತಾಲೂಕಿನಲ್ಲಿ ಒಟ್ಟು **156** ಗ್ರಾಮಗಳಿದ್ದು, **35** ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿರುತ್ತವೆ.
3. ಮಣ್ಣು ಮಧ್ಯಮದಿಂದ ಅಲ್ಪ ಆಳದ ಮಣ್ಣು (ಗರಸು/ ಕಟಕು) ಕೂಡಿದ್ದು, ಕೆಲವು ಕಡೆ ಸಾಧಾರಣ ಕಪ್ಪು,40%, ಕೆಂಪು ಮಿಶ್ರಿತ ಎರೆ ಭೂಮಿ 50% ರಷ್ಟಿದೆ. ಭೂಮಿಯಲ್ಲಿ ಜಿಂಕ್,ಬೊರಾನ, ಫೇರೆಸ್ ಅಂಶವು ಕೊರತೆ ಇರುತ್ತದೆ.
4. ರಾಮದುರ್ಗ ತಾಲೂಕಿನಲ್ಲಿ ಹೆಚ್ಚಾಗಿ ಹಣ್ಣಿನ ಬೆಳೆಗಳಾದ ಬಾಳೆ, ಮಾವು, ಚಿಕ್ಕು, ಕಲ್ಲಂಗಡಿ ಬೆಳೆಗಳಾದ ತರಕಾರಿ ಬೆಳೆಗಳಾದ ಕ್ಯಾಬೀಜ, ಕಾಲಿಪ್ಲಾವರ್, ಈರುಳ್ಳಿ, ಬದನೆ, ಟೊಮೆಟೋ, ಗಜ್ಜರಿ, ದೊಣ್ಣೆ ಮೆನಸಿನಕಾಯಿ, ಮೆನಸಿನಕಾಯಿ, ಮುಲಂಗಿ, ವಟಾಣಿ, ಆಳೂಗಡ್ಡೆ, ಬೇಂಡಿಕಾಯಿ, ಚವಳಿ, ಹಿರಿಕಾಯಿ,ಪಾಲಕ, ಸವತೆಕಾಯಿ, ಹಾಗೂ ಮಸಾಲೆ ಬೆಳೆಗಳಾದ ಬಳ್ಳೊಳ್ಳಿ ಮತ್ತು ಕೊತಂಬರಿ ಬೆಳೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ.
5. ತಾಲೂಕಿನಲ್ಲಿ ಭಾಗೋಜಿಕೊಪ್ಪ ಗ್ರಾಮದಲ್ಲಿ ಏತ ನೀರಾವರಿ ಯೋಜನೆ ,ಮಲಪ್ರಭಾ ಕಾಲುವೆ. ಹೋಳಿ ಪೈಪಲೈನ ಮತ್ತು ಬೋರವೆಲ್‌ಗಳ ಮುಖಾಂತರ ನೀರಾವರಿ ಸೌಲಭ್ಯಗಳನ್ನು ಹೊಂದಿರುತ್ತವೆ.
6. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನಲ್ಲಿ ಬಾಳೆ, ಮಾವು ಮತ್ತು ತರಕಾರಿ ಯನ್ನು ಅತೀ ಹೆಚ್ಚಿನ ಪ್ರದೇಶದಲ್ಲಿ ಬೆಳೆಯುತ್ತಿದ್ದು ಇಲಾಖೆಯಿಂದ ನೀಡುವ ಸಹಾಯಧನದಿಂದ ರೈತರು ಬಾಳೆ, ಮಾವು ಮತ್ತು ತರಕಾರಿ ಯನ್ನು ಬೆಳೆಯುವಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಅದಲ್ಲದೇ ತಾಲೂಕಿನ ದಕ್ಷಿಣ ಭಾಗದಲ್ಲಿ ನಿರಾವರಿ ಇರುವದರಿಂದ ಬಾಳೆ ಬೆಳೆ ಬೆಳೆಯುತ್ತಿದ್ದು ರಾಜ್ಯದ ತೋಟಗಾರಿಕೆಯ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ.

**ತಾಲೂಕಿನ ಮುಖ್ಯ ತೋಟಗಾರಿಕಾ ಬೆಳೆಗಳು**

| ಬೆಳೆ | ತಳಿ |
|---|---|
| ಬಾಳೆ | ಜಿ–9 |
| ಮಾವು | ಆಲ್ಫಾನಸೋ, ಮಲ್ಲಿಕಾ, ರಸಪೂರಿ, ಪೈರಿ, ತೋತಾಪೂರಿ |
| ಪಪ್ಪಾಯ | ಥೈವಾನ್ ತಳಿಗಳು |
| ದಾಳಿಂಬೆ | ಬಗ್ವಾ |
| ದ್ರಾಕ್ಷಿ | ತಾಮಸನ್ ಸಿಡಲೆಸ್ |

## ಜಿಲ್ಲೆಯಲ್ಲಿರುವ ತೋಟಗಾರಿಕೆ ಬೆಳೆಗಳ ಮಾಹಿತಿ

2016–17 ನೇ ಸಾಲಿಗೆ ರಾಮದುರ್ಗ ತಾಲೂಕಿನಲ್ಲಿ ಬೆಳೆಯಲಾದ ತೋಟಗಾರಿಕೆ ಬೆಳೆಗಳ ಒಟ್ಟು ಮಾಹಿತಿ ಈ ಕೆಳಗಿನಂತಿದೆ.

| ಕ್ರ.ಸಂ | ಬೆಳೆಗಳು | ವಿಸ್ತೀರ್ಣ (ಹೆ) | ಉತ್ಪನ (ಟನ್) | ಮೌಲ್ಯ (ರೂ. ಲಕ್ಷ) |
|---|---|---|---|---|
| 1 | ಹಣ್ಣಿನ ಬೆಳೆಗಳು | ***646.26*** | ***12124.07*** | ***1602.13*** |
| 2 | ತರಕಾರಿ ಬೆಳೆಗಳು | ***721.33*** | ***13357.15*** | ***1423.13*** |
| 3 | ತೋಟದ ಬೆಳೆಗಳು | ***791.87*** | ***102.74*** | ***1026.86*** |
| 4 | ಸಾಂಬಾರು ಬೆಳೆಗಳು | ***92.88*** | ***448.61*** | ***346.81*** |
| 5 | ಹೂವಿನ ಬೆಳೆಗಳು | ***303.26*** | ***3453.72*** | ***580.93*** |
| | **ಒಟ್ಟು** | **2555.6** | **29486.29** | **4979.86** |

## ಹೋಬಳಿವಾರು ತೋಟಗಾರಿಕೆ ಬೆಳೆಗಳ ಮಾಹಿತಿ

| ಕ್ರ.ಸಂ | ತಾಲ್ಲೂಕು | ವಿಸ್ತೀರ್ಣ (ಹೆ) | ಉತ್ಪನ (ಟನ್) | ಮೌಲ್ಯ (ರೂ. ಲಕ್ಷ) |
|---|---|---|---|---|
| 1 | ಸುರೇಬಾನ | ***735.61*** | ***7433.97*** | ***1367.80*** |
| 2 | ಮುದಕವಿ | ***658.08*** | ***7706.45*** | ***1344.21*** |
| 3 | ಕೆ.ಚಂದರಗಿ | ***551.81*** | ***7126.43*** | ***1100.34*** |
| 4 | ಕಟಕೋಳ | ***610.10*** | ***7219.44*** | ***1167.51*** |

## ತಾಲೂಕಿನಲ್ಲಿರುವ ತೋಟಗಾರಿಕೆ ಕ್ಷೇತ್ರ / ಸಸ್ಯಾಗಾರಗಳ ಮಾಹಿತಿ

| ಕ್ರ. ಸಂ | ತೋಟಗಾರಿಕೆ ಕ್ಷೇತ್ರ ಹೆಸರು ಮತ್ತು ವಿಳಾಸ | ಒಟ್ಟು ವಿಸ್ತೀರ್ಣ (ಹೆ) | ಅಭಿವೃದ್ಧಿಪ–ಡಿಸಿದ ವಿಸ್ತೀರ್ಣ ಹೆ) | ಅಭಿವೃದ್ಧಿಪಡಿ–ಸಬೇಕಾಗಿರುವ ವಿಸ್ತೀರ್ಣ (ಹೆ) | ಮೂಲಭೂತ ಸೌಕರ್ಯಗಳು |
|---|---|---|---|---|---|
| 1 | ಶಿವಪೇಠ ತೋಟಗಾರಿಕೆ ಕ್ಷೇತ್ರ | 13.00 | 12.00 | 1.00 | ಕೊಳವೆ ಬಾವಿ –2 ಒಂದು ( 1 ಕೊಳವೆ ಭಾವಿ ಗೆ ನೀರು ಇರುವದಿಲ್ಲಾ), 1/2 ಊಕ ಮೋಟಾರ 1 , ಶೆಡ್ ನೆಟ್ಟ 1, ತಂತಿ ಬೇಲಿ, ವಾಚಮಾನ್ ಕ್ವಾಟರಸ್ ದುರಸ್ಥಿಯಾಗಬೇಕಾಗಿದೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ರವರ ಅಧಿನದಲ್ಲಿ ಇರುತ್ತದೆ. |
| 2 | ರಾಮದುರ್ಗ ಕಛೇರಿ ಸಸ್ಯಗಾರ | 2.00 | 2.00 | 0.00 | ಇಲ್ಲಾ |

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,(ಜಿ.ಪಂ), ರಾಮದುರ್ಗ ಕಾರ್ಯಾಲಯದ ಅಧಿಕಾರಿ/ನೌಕರರ ಆಡಳಿತಾತ್ಮಕ ವ್ಯವಸ್ಥೆಯ ವಿವರಗಳು.**



2. ರಾಮದುರ್ಗ ತಾಲೂಕಿನಲ್ಲಿ ಒಟ್ಟು 4 ಹೋಬಳಿಗಳಿದ್ದು, 4 ರೈತ ಸಂಪರ್ಕ ಕೇಂದ್ರಗಳಿಗೆ 4 ಸಹಾಯಕ ತೋಟಗಾರಿಕೆ ಅಧಿಕಾರಿಗಳು ಹಾಗೂ 1 ತಾಂತಿಕ ಸಹಾಯಕ (ಸಹಾಯಕ ತೋಟಗಾರಿಕೆ ಅದಿಕಾರಿ)ಯವರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಈ ಎಲ್ಲ ಹೋಬಳಿಗಳಿಗೆ ಸಹಾಯಕ ತೋಟಗಾರಿಕೆ ಅಧಿಕಾರಿ ಮುಖ್ಯಸ್ಥರಾಗಿರುತ್ತಾರೆ. ಈ ತಾಲೂಕಿನಲ್ಲಿ ಎರಡು ತೋಟಗಾರಿಕೆ ಕ್ಷೇತ್ರ ಇದ್ದು (ರಾಜ್ಯ ವಲಯ ವ್ಯಾಪ್ತಿಯಲ್ಲಿ) ಇರುತ್ತದೆ. ತಾಲೂಕಿನಲ್ಲಿ ಒಟ್ಟು ಇಬ್ಬರು ತೋಟಗಾರಿಕೆ ಸಹಾಯಕರು ಶಿವಪೇಠ ಮತ್ತು ರಾಮದುರ್ಗ ಸಸ್ಯಗಾರ ತೋಟಗಾರಿಕೆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.
3. ತೋಟಗಾರ ಸಹಾಯಕರು ಹುದ್ದೆ ಖಾಲಿ ಇರುತ್ತದೆ.

**4(ಬಿ)(I): ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಕಂಡಂತೆ ಇರುತ್ತವೆ.**

**ಸಾಮಾನ್ಯ ಕಾರ್ಯಗಳು:**

1. ತಾಲೂಕಿನ ಇಲಾಖೆಯು ಕೇಂದ್ರ ಕಚೇರಿಯಾಗಿದ್ದು, ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಟಾನಗೊಳಿಸುವುದು.
2. ತೋಟಗಾರಿಕೆ ಇಲಾಖೆಯಿಂದ ಅನುಷ್ಟಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳನ್ನು ಹೋಬಳಿವಾರು ಹಂಚಿಕೆ ಮಾಡಿ ಸಮರ್ಪಕವಾಗಿ ಅನುಷ್ಠಾನಗೊಳಿಸುವುದು.
3. ಅಧೀನ ಕಚೇರಿಗಳು/ರೈತ ಸಂಪರ್ಕ ಕೇಂದ್ರಗಳು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಅವಶ್ಯಕವಿರುವ ಮಾರ್ಗದರ್ಶನ ನೀಡುವುದು.
4. ತೋಟಗಾರಿಕೆ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಅವಶ್ಯವಿರುವ ಮಾರ್ಗದರ್ಶನ ನೀಡುವುದು.
5. ತಾಲೂಕಾ ಮಟ್ಟದಲ್ಲಿ ವಿವಿಧ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿಯ ಪರಿಶೀಲನೆ ಮಾಡಿ ತಾಲೂಕಿನ ಕ್ರೋಢಿಕೃತ ಪ್ರಗತಿ ವರದಿಯನ್ನು ತಯಾರಿಸಿ ಜಿಲ್ಲಾ ಮಟ್ಟಕ್ಕೆ ಸಲ್ಲಿಸುವುದು.
6. ತಾಲೂಕಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಗಳಿಗೆ ಇಲಾಖೆಯ ಪ್ರತಿನಿಧಿಯಾಗಿ ಭಾಗವಹಿಸುವುದು.
7. ಪ್ರಕೃತಿ ವಿಕೋಪ ಸಂಭವಿಸಿದ ಸಮಯದಲ್ಲಿ ಆಗಿರುವ ಹಾನಿಯ ಅಂದಾಜನ್ನು ಪರಿಶೀಲಿಸಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಸಹಾಯಧನಕ್ಕೆ ಕಂದಾಯ ಇಲಾಖೆಗೆ ಶಿಫಾರಸ್ಸು ಮಾಡುವುದು.

**ವಿಸ್ತರಣೆ ಮತ್ತು ತರಬೇತಿ**

1. ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಕುರಿತು ರೈತರಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡುವುದು.
2. ತೋಟಗಾರಿಕೆ ಬೆಳೆಗಳ ಬೇಸಾಯ, ನಿರ್ವಹಣೆ, ಕೊಯ್ಲು, ಸಂಸ್ಕರಣೆ ಕುರಿತು ರೈತರಿಗೆ ತರಬೇತಿ ನೀಡುವುದು.
3. ತೋಟಗಾರಿಕೆಯಲ್ಲಿ ಸಾವಯವ ಕೃಷಿ, ಜೇನು ಕೃಷಿ ಮುಂತಾದ ಅವಶ್ಯಕ ಹೊಸ ತಂತ್ರಜ್ಞಾನಗಳನ್ನು ರೈತರಿಗೆ ತರಬೇತಿ, ವಿಚಾರ ಸಂಕೀರ್ಣ, ಕಾರ್ಯಾಗಾರ ಮುಂತಾದವುಗಳನ್ನು ಏರ್ಪಡಿಸುವ ಮೂಲಕ ಮಾಹಿತಿ ಒದಗಿಸುವುದು.
4. ತೋಟಗಾರಿಕೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಹೊಸ ಹೊಸ ಯೋಜನೆಗಳ ಮಾಹಿತಿಯನ್ನು ರೈತರಿಗೆ ತಲುಪುವಂತೆ ಮಾಡುವುದು.
5. ರೈತರ ಮಕ್ಕಳಿಗೆ, ರೈತರಿಗೆ ಹಾಗೂ ರೈತ ಮಹಿಳೆಯರಿಗೆ ತರಬೇತಿ ನೀಡುವುದು.
6. ರೈತರನ್ನು ರಾಜ್ಯ ಮತ್ತು ಹೊರ ರಾಜ್ಯಗಳ ಉತ್ತಮ ತೋಟ, ಸಂಶೋಧನಾ ಕೇಂದ್ರಗಳಿಗೆ ಪ್ರವಾಸ ಕೈಗೊಂಡು ರೈತರ ಜ್ಞಾನ ವರ್ಧನೆಗೆ ಸಹಕರಿಸುವುದು.

**ಪ್ರದೇಶ ವಿಸ್ತರಣೆ:**

1. ತಾಲೂಕಿನ ವಾತಾವರಣಕ್ಕೆ ಸೂಕ್ತವಾದ ತಳಿಗಳನ್ನು ಆಯ್ಕೆ ಮಾಡಿ ಅವುಗಳ ಪ್ರದೇಶ ವಿಸ್ತರಣೆ ಕೈಗೊಳ್ಳುವುದು.
2. ಆಯಾ ಪದೇಶಗಳಿಗೆ ಸೂಕ್ತವಾದ ಬೆಳೆಗಳನ್ನು ಮತ್ತು ತಳಿಗಳನ್ನು ಆಯ್ಕೆ ಮಾಡಿ ಯೋಗ್ಯ ಫಲಾನುಭವಿಗಳಿಂದ ಪ್ರದೇಶ ವಿಸ್ತರಣೆ ಕೈಗೊಳ್ಳುವುದು.
3. ಹಣ್ಣು, ತರಕಾರಿ, ಹೂವಿನ ಬೆಳೆಗಳು, ತೋಟದ ಬೆಳೆಗಳು, ಸಾಂಬಾರು ಬೆಳೆಗಳು,ಬೆಳೆಗಳ ಪ್ರದೇಶ ವಿಸ್ತರಣೆಗೆ ಯೋಗ್ಯವಾದ ಪರಿಸರವನ್ನು ಆಯ್ಕೆ ಮಾಡಿ ಅಲ್ಲಿನ ರೈತರಿಗೆ ಸದರಿ ಬೆಳೆಗಳ ಪ್ರದೇಶ ವಿಸ್ತರಣೆಗೆ ಪ್ರೋತ್ಸಾಹಿಸುವುದು.
4. ಹೊಸ ಬೆಳೆಗಳು, ತಳಿಗಳನ್ನು ಪರಿಚಯಿಸುವುದು.

**ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಪೀಡೆ ನಿರ್ವಹಣೆ**

1. ತೋಟಗಾರಿಕೆ ಬೆಳೆಗಳಿಗೆ ಅವಶ್ಯವಿರುವ ಪೋಷಕಾಂಶಗಳ ನಿರ್ವಹಣೆ ಮಾಡಲು ಬೇಕಾದ ಜೈವಿಕ ಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸುವ ವ್ಯವಸ್ಥೆ ಮಾಡುವುದು.
2. ಮಣ್ಣಿನ ರಸಸಾರ ನಿರ್ವಹಣೆಗೆ ಅವಶ್ಯವಾದ ಸುಣ್ಣ / ಜಿಪ್ಸಂ ಬಳಸಲು ಪೋತ್ಸಾಹಿಸುವುದು.
3. ಹಸಿರೆಲೆ ಗೊಬ್ಬರಗಳ ಮಹತ್ವವನ್ನು ರೈತರಿಗೆ ಮನದಟ್ಟು ಮಾಡಿ ಬಳಕೆಗೆ ಪ್ರೋತ್ಸಾಹಿಸುವುದು.
4. ಜೈವಿಕ ಪದ್ಧತಿಯಲ್ಲಿ ರೋಗ ಮತ್ತು ಕೀಟಗಳ ನಿಯಂತ್ರಣ ಪದ್ಧತಿಗೆ ಪ್ರೋತ್ಸಾಹಿಸುವುದು.
5. ಬೋರ್ಡೋ ಮಿಶ್ರಣ, ಜೈವಿಕ ಕೀಟನಾಶಕಗಳು, ಬಳಕೆಗೆ ಸಹಾಯಧನ ಒದಗಿಸುವುದು..

**ಸಾವಯವ ಕೃಷಿ**

1. ಸ್ಥಳೀಯವಾಗಿ ಲಭ್ಯವಿರುವ ಕೃಷಿ ತ್ಯಾಜ್ಯ ವಸ್ತುಗಳನ್ನು ಬಳಸಿಕೊಂಡು ಅತಿ ಕಡಿಮೆ ಖರ್ಚಿನಲ್ಲಿ ಎರೆಹುಳು ಗೊಬ್ಬರ, ಬಯೋಡೈಜೆಸ್ಟರ್‌ಗಳನ್ನು ನಿರ್ಮಿಸಲು ಪ್ರೋತ್ಸಾಹಿಸುವುದು.

**ಕೊಯ್ಲೋತ್ತರ ನಿರ್ವಹಣೆ**

2. ತೋಟಗಾರಿಕೆ ಬೆಳೆಗಳಾದ ಹಣ್ಣು, ತರಕಾರಿ, ತೋಟದ ಬೆಳೆಗಳು, ಔಷಧಿ ಸಸ್ಯಗಳು ಮತ್ತು ಸುಗಂಧ ದ್ರವ್ಯ ಬೆಳೆಗಳ ಕೊಯ್ಲೋತ್ತರ ನಿರ್ವಹಣೆಗೆ ಪೋತ್ಸಾಹಿಸುವುದು.
3. ತೋಟಗಾರಿಕೆ ಬೆಳೆಗಳ ಅವಶ್ಯಕತೆಗೆ ತಕ್ಕಂತೆ ಪ್ಯಾಕ್ ಹೌಸ್‌ಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
4. ಶೀಥಲ ಗೃಹ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.

**ಇತರೆ ಕಾರ್ಯಗಳು**

1. ತಾಲೂಕಿನ ವಿವಿಧ ಹಿರಿಯ ಅಧಿಕಾರಿಗಳು ಮತ್ತು ಮಾನ್ಯ ತೋಟಗಾರಿಕೆ ಉಪನಿರ್ದೇಶಕರು, ಮತ್ತಿತರ ಮೇಲಾಧಿಕಾರಿಗಳು ಸೂಚಿಸುವ ವಿಶೇಷ ಕೆಲಸಗಳನ್ನು ನಿರ್ವಹಿಸುವುದು.
2. ಜನಸ್ಪಂದನ ಸಭೆಗಳಿಗೆ ಹಾಜರಾಗಿ ಇಲಾಖೆಯ ಯೋಜನೆಗಳ ಕುರಿತು ಮಾಹಿತಿ ನೀಡುವುದು ಹಾಗೂ ಗ್ರಾಮ ಸಭೆಗಳಲ್ಲಿ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವದು.
3. ಪ್ರಕೃತಿ ವಿಕೋಪ ಮುಂತಾದ ಸಮಯಗಳಲ್ಲಿ ಮೇಲಾಧಿಕಾರಿಗಳ ಆದೇಶದ ಮೇರೆಗೆ ಕೆಲಸ ನಿರ್ವಹಿಸುವುದು.
4. ಕಾಲಕಾಲಕ್ಕೆ ಸೂಚಿಸಲಾಗುವ ಇನ್ನಿತರೆ ವಿಶೇಷ ಕಾರ್ಯ ನಿರ್ವಹಿಸುವುದು.

**4(ಬಿ)(II): ಅಧಿಕಾರಿ/ನೌಕರರುಗಳ ಅಧಿಕಾರ ಮತ್ತು ಕರ್ತವ್ಯಗಳು.**

| | | |
|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ). ರಾಮದುರ್ಗ | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಏಜನ್ಸಿ ಯೋಜನೆ, ರಾಜ್ಯವಲಯದ ಯೋಜನೆಗಳು, ತಾಲೂಕು ಮಟ್ಟದ ಯೋಜನೆಗಳನ್ನು ನಿಗದಿತ ಗುರಿಯಂತೆ ಕಾಲಮಿತಿಯೊಳಗಾಗಿ ಅನುಷ್ಠಾನಗೊಳ್ಳುವಂತೆ ಕ್ರಮವಹಿಸುವದು, ಕಡತಗಳ ಪರಿಶೀಲನೆ, ಮೇಲುಸ್ತುವಾರಿ ಕೈಗೊಳ್ಳುವುದು. ಮತ್ತು ಮೇಲಾಧಿಕಾರಿಗಳು ಸೂಚಿಸಿದ ಇನ್ನಿತರ ಕೆಲಸಗಳನ್ನು ನಿರ್ವಹಿಸುವದು |
| 2 | ತಾಂತ್ರಿಕ ಸಹಾಯಕರು/ಸಹಾಯಕ ತೋಟಗಾರಿಕೆ ಅಧಿಕಾರಿ | ತಾಂತ್ರಿಕ ವಿಭಾಗದ ಕಡತಗಳನ್ನು ಪರಿಶೀಲಿಸುವುದು ತಾಲೂಕುಮಟ್ಟದಿಂದ ಪ್ರಗತಿ ವರದಿಗಳನ್ನು ತಯಾರಿಸುವದು. ಇ–ಮೇಲ್ ಮುಖಾಂತರ ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ತರುವುದು. ಅನುಮೋದಿತ ಎಂ.ಎಂ.ಆರ್.ಕಾರ್ಯಕ್ರಮಗಳ ಪ್ರಕಾರ ಉಳಿದ ಅಧಿಕಾರಿಗಳಿಗೆ ಕಾಲಕಾಲಕ್ಕೆ ಮಾಹಿತಿ ನೀಡುವದು.ತಾಲೂಕಿನ ಬಿತ್ತನೆಯಾದ ಕ್ಷೇತ್ರದ ಮಾಹಿತಿ ನೀಡುವದು.ತೆಂಗು ತೋಟಗಾರಿಕೆ |

| | | |
|---|---|---|
| | | ಕ್ಷೇತ್ರದ ಪ್ರಗತಿ ವರದಿ ಸಲ್ಲಿಸುವದು. ವಿವಿಧ ಸಭೆ ನಡವಳಿಗಳಿಗೆ ಅನುಸರಣಾ ವರದಿ ಸಲ್ಲಿಸುವುದು, ಸಹಾಯಧನದ ಅರ್ಜಿಗಳಿಗೆ ಮಂಜೂರಾತಿ ನೀಡುವುದು ,ತಾಲೂಕಿನ ವಿವಿಧ ಯೋಜನೆಗಳ ಮಾಹೆವಾರು ಪ್ರಗತಿ ವರದಿ ಸಲ್ಲಿಸುವದು ಮತ್ತು ಮೇಲಾಧಿಕಾರಿಗಳು ಸೂಚಿಸಿದ ಇನ್ನಿತರ ಕೆಲಸಗಳನ್ನು ನಿರ್ವಹಿಸುವದು. |
| 3 | ಪ್ರಥಮ ದರ್ಜೆ ಸಹಾಯಕರು | ಕಾರ್ಯಾಲಯದ ಸಿಬ್ಬಂದಿ ವರ್ಗದವರ ಸಂಬಳದ ಬಿಲ್ಲು ತಯಾರಿಸುವದು, ನಗದು ಪುಸ್ತಕ ನಿರ್ವಹಣೆ, ಜಿಲ್ಲಾ ಪಂಚಾಯತ್, ರಾಜ್ಯವಲಯ ಹಾಗೂ ತಾಲೂಕು ಪಂಚಾಯತ ನಿಧಿಗಳ ನಿರ್ವಹಣೆ ಮತ್ತು ಮರು ಹಂಚಿಕೆ. ಸಾದಿಲ್ವಾರು ಬಿಲ್ಲುಗಳನ್ನು ಪರಿಶೀಲಿಸಿ ಮೇಲುರುಜುವಿಗೆ ಮಂಡಿಸುವದು ನಿಯಮಗಳ ಪ್ರಕಾರ ಮತ್ತು ಕೈಪಿಡಿಯಲ್ಲಿಯ ನಿಯಮಗಳನ್ವಯ ಲೆಕ್ಕಶಾಖೆಯನ್ನು ನಿರ್ವಹಿಸುವದು, ಹಾಗೂ ವಾರ್ಷಿಕ ಸಾಲಿನ ಅಧಿಕಾರಿ/ಸಿಬ್ಬಂದಿಗಳ ಆಯವ್ಯಯ ಅಂದಾಜಿನ ಅನುಬಂಧ–ಬಿ ನಿರ್ವಹಣೆ ಇತ್ಯಾದಿ. |
| 4 | ತೋಟಗಾರಿಕೆ ಸಹಾಯಕರು | ಕಛೇರಿ ಕೇಲಸ, ತೋಟಗಾರಿಕೆ ಕ್ಷೇತ್ರದ ಕಾರ್ಯಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೋಳಿಸುವದು, ಮೇಲಾಧಿಕಾರಿಗಳು ಸೂಚಿಸಿದ ಇನ್ನಿತರ ಕೆಲಸಗಳನ್ನು ನಿರ್ವಹಿಸುವದು. |
| 5 | ತೋಟಗಾರ: | ಸಹಾಯಕ ತೋಟಗಾರಿಕೆ ಅಧಿಕಾರಿಗಳು ಸೂಚಿಸಿದ ಕೆಲಸಗಳನ್ನು ನಿರ್ವಹಿಸುವುದು, ತೋಟಗಾರಿಕೆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವದು, ಕಳೆ ತೆಗೆಯುವದು, ತೋಟವನ್ನು ಸ್ವಚ್ಛವಾಗಿಡುವದು ಹಾಗೂ ಮೇಲಾಧಿಕಾರಿಗಳು ಸೂಚಿಸಿದ ಇನ್ನಿತರ ಕೆಲಸಗಳನ್ನು ನಿರ್ವಹಿಸುವದು. |

## 4(ಬಿ) III :– ನಿರ್ಣಯ ತೆಗೆದುಕೊಳ್ಳುವಂತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾದ ಕ್ರಮ, ಮೇಲ್ವಿಚಾರಣೆ ಚಾನಲ್‌ಗಳ ಮತ್ತು ಅಕೌಂಟೆಬಿಲಿಟಿ ಸೇರಿದಂತೆ:

| | | |
|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಜಿ.ಪಂ, ರಾಮದುರ್ಗ | ಪ್ರಸ್ತಾವನೆಗಳ ಕುರಿತು ತೆಗೆದುಕೊಳ್ಳುವ ಕ್ರಮದ ಬಗ್ಗೆ ತೀರ್ಮಾನಿಸುವುದು. ನಮ್ಮ ಹುದ್ದೆಗೆ ನೀಡಿದ ಅಧಿಕಾರ ವ್ಯಾಪ್ತಿಯೊಳಗೆ ಅನುಮೋದಿಸಿ ಮಂಜೂರಾತಿ ನೀಡುವುದು. ಅಗತ್ಯ ಸಂದರ್ಭದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು. |
| 2 | ತಾಂತ್ರಿಕ ಸಹಾಯಕರು/ಸಹಾಯಕ ತೋಟಗಾರಿಕೆ ಅಧಿಕಾರಿ | ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟ ಕಡತಗಳನ್ನು ವಿಷಯವಾರು ವಿಂಗಡಿಸುವದು. ಪ್ರಗತಿ ವರದಿಗಳನ್ನು ಪರಿಶೀಲಿಸುವದು ಮತ್ತು ಇ–ಮೇಲ್ ಮುಖಾಂತರ ಮೇಲಾಧಿಕಾರಿಗಳಿಗೆ ಅನುಮೋದನೆ ಪಡೆದು ಕಳಿಸುವದು. ಜಿ.ಪಂ. ಮತ್ತು ಇಲಾಖಾ ಮುಖ್ಯಸ್ಥರಿಂದ ಬರುವ ತಾಂತ್ರಿಕ ಮಾಹಿತಿಗಳಿಗೆ ಸೂಕ್ತವಾಗಿ ಉತ್ತರಿಸುವದು. ಸಹಾಯಧನದ ಕಡತಗಳನ್ನು ಪರಿಶೀಲಿಸಿ ಅನುಮೋದನೆಗೆ ಮಂಡಿಸುವದು. ಅನುಮೋದನೆಯಾದ ಎಂ.ಎಂ.ಆರ್. ಕಾರ್ಯಕ್ರಮಗಳ ಪ್ರಕಾರ ಯೋಜನೆಯ ಅನುಷ್ಠಾನದ ಕುರಿತು ಮಾರ್ಗದರ್ಶನದ ಮೂಲಕ ಹೋಬಳಿ ಅಧಿಕಾರಿಗಳಿಗೆ ತಿಳುವಳಿಕೆ ನೀಡುವುದು. |
| 3 | ಪ್ರಥಮ ದರ್ಜೆ ಸಹಾಯಕರು. | ತಮ್ಮ ವಿಭಾಗಕ್ಕೆ ಬರುವ ಪತ್ರಗಳನ್ನು ಸ್ವೀಕರಿಸುವದು, ಸಂಬಂಧಪಟ್ಟ ನಿಯಮಗಳ ಮತ್ತು ಸುತ್ತೋಲೆಗಳ ಪ್ರಕಾರ ಪರಿಶೀಲಿಸಿ ಟಿಪ್ಪಣಿಯನ್ನು ಬರೆದು ಮುಂದಿನ ಆದೇಶಕ್ಕಾಗಿ ಕಡತವನ್ನು ಕಚೇರಿ ಕೈಪಿಡಿಯನ್ವಯ ವಿಳಂಬವಿಲ್ಲದೆ ತ್ವರಿತವಾಗಿ ತಮ್ಮ ಶಾಖಾಧಿಕಾರಿಗಳಿಗೆ ಮಂಡಿಸುವದು. ಮೇಲಾಧಿಕಾರಿಗಳು ಕಾಲ ಕಾಲಕ್ಕೆ ನೀಡುವ ಸೂಚನೆಗಳನ್ನು ಕಾರ್ಯಗತಗೊಳಿಸುವದು. |

## 4(ಬಿ)IV:– ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗದಿಪಡಿಸಲಾದ ವಿಧಾನಗಳು, ಕಟ್ಟುಪಾಡುಗಳು.

| | | |
|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ), ರಾಮದುರ್ಗ | ತಾಲೂಕಿನಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಿಗೆ ವಹಿಸಿದ ಅಭಿವೃದ್ಧಿ, ವಿಸ್ತರಣೆ ಹಾಗೂ ಆಡಳಿತ ನಿರ್ವಹಣೆ ಅಧೀನ ಅಧಿಕಾರಿ/ ಸಿಬ್ಬಂಧಿಗಳಿಂದ ಯಶಸ್ವಿಯಾಗಿ ಮತ್ತು ಶೀಘ್ರವಾಗಿ ನಿರ್ವಹಿಸಲು ಕ್ರಮವಹಿಸುವುದು. ಇಲಾಖೆಯ ತಾಲೂಕು ಉಸ್ತುವಾರಿ ವಹಿಸುವುದು. |
| 2 | ತಾಂತ್ರಿಕ | ತೋಟಗಾರಿಕೆ ಉಪನಿರ್ದೇಶಕರ ಕಚೇರಿಯಿಂದ ಜಿ.ಪಂ ಹಾಗೂ ತಾ.ಪಂ.ಕಚೇರಿಯಿಂದ |

| | | |
|---|---|---|
| | ಸಹಾಯಕರು/ಸಹಾಯಕ ತೋಟಗಾರಿಕೆ ಅಧಿಕಾರಿ | ಬರುವ ಅನುಮೋದಿತ ಎಂ.ಎಂ.ಆರ್.ಕಾರ್ಯಕ್ರಮಗಳ ಪ್ರಕಾರ ಹೋಬಳಿ ಮಟ್ಟದಲ್ಲಿ ಕಾರ್ಯಗಳನ್ನು ನಿರ್ವಹಿಸುವಂತೆ ಕ್ರಮವಹಿಸುವುದು. ಸಂಬಂಧಿಸಿದ ಕಡತಗಳನ್ನು ರಚಿಸಿ ಅನುಮೋದನೆ ಪಡೆಯುವುದು. ಇಲಾಖೆಯ ಸಹಾಯಧನ ಕಡತಗಳನ್ನು ಮಾರ್ಗಸೂಚಿಗಳನ್ವಯ ತಯಾರಿಸಿ ಇಲಾಖಾ ಮುಖ್ಯಸ್ಥರ ಅಥವಾ ಈ ಕಚೇರಿಯ ಮಂಜೂರಾತಿಗೆ ನಿಯಮಗಳನ್ವಯ ಕಡತಗಳನ್ನು ಮಂಡಿಸುವದು. ಮೇಲಾಧಿಕಾರಿಗಳು ಕಾಲ ಕಾಲಕ್ಕೆ ನೀಡುವ ಸೂಚನೆಗಳನ್ನು ಕಾರ್ಯಗತಗೊಳಿಸುವದು. |
| 3 | ಪ್ರಥಮ ದರ್ಜೆ ಸಹಾಯಕರು | ಹಂಚಿಕೆಯಾದಂತಹ ವಿಷಯವನ್ನು ಸಮರ್ಪಕವಾಗಿ ನಿಯಮಗಳ ಪ್ರಕಾರ ಪರಿಶೀಲಿಸಿ ಕಡತವನ್ನು ರಚಿಸಿ, ಕಚೇರಿ ಕೈಪಿಡಿಯಲ್ಲಿನ ನಿಯಮಗಳ ಪ್ರಕಾರ ಮುಂದಿನ ಆದೇಶ ಕೋರಿ ಕಡತ ಮಂಡಿಸುವದು. ಮೇಲಾಧಿಕಾರಿಗಳು ಕಾಲ ಕಾಲಕ್ಕೆ ನೀಡುವ ಸೂಚನೆಗಳನ್ನು ಕಾರ್ಯಗತಗೊಳಿಸುವದು. |
| 4 | ತೋಟಗಾರಿಕೆ ಸಹಾಯಕರು | ಸ.ತೋ.ಅ ರವರ ಎಲ್ಲ ಕೆಲಸ ಕಾರ್ಯಗಳಲ್ಲಿ ಸಹಕಾರ ನೀಡುವದು. ದಾಸ್ತಾನು ನಿರ್ವಹಣೆ ಮಾಡುವುದು. ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವದು. ಮೇಲಾಧಿಕಾರಿಗಳು ಕಾಲ ಕಾಲಕ್ಕೆ ನೀಡುವ ಸೂಚನೆಗಳನ್ನು ಕಾರ್ಯಗತಗೊಳಿಸುವದು. |
| 5 | ತೋಟಗಾರರು | ವಹಿಸಲಾದ ಎಲ್ಲಾ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವದು ಮತ್ತು ಕಡತಗಳ ಚಲನವಲನ ವಹಿಯನ್ನು ನಿರ್ವಹಿಸುವದು, ಸಹಾಯಕ ತೋಟಗಾರಿಕೆ ಅಧಿಕಾರಿಗಳು ಸೂಚಿಸಿದ ಕೆಲಸಗಳನ್ನು ನಿರ್ವಹಿಸುವುದು ಮೇಲಾಧಿಕಾರಿಗಳ ಆದೇಶ ಪಾಲಿಸುವದು. |

**4(ಬಿ) (V): ನೌಕರರು ಅವರವರ ಕರ್ತವ್ಯಗಳನ್ನು ನಿರ್ವಹಿಸಲಾದ ಪಯೋಗಿಸುವ/ ನಿಯಂತ್ರಣದಲ್ಲಿಟ್ಟುಕೊಂಡಿರುವ ನಿಯಮಗಳು /ಸೂಚನೆಗಳು/ಕೈಪಿಡಿಗಳು/ದಾಖಲೆಗಳು ಮತ್ತು ನಿಬಂಧನೆಗಳು.**

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಕೆಸಿಎಸ್ಆರ್)
2. ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ ನಿಯಂತ್ರಣ,ಮೇಲ್ಮನವಿ ನಿಯಮಗಳು) (ಸಿಸಿಎ ರೂಲ್ಸ.)
3. ಕರ್ನಾಟಕ ಆರ್ಥಿಕ ಸಂಹಿತೆ (ಕೆಎಫಸಿ)
4. ಕಚೇರಿ ಕೈಪಿಡಿ (ಹೆಚ್ಬಿಓಪಿ)
5. ವೃಂದ ಮತ್ತು ನೇಮಕಾತಿ ನಿಯಮಗಳು ಸಿ ಮತ್ತು ಆರ್ ರೂಲ್ಸ.
6. ಆಯವ್ಯಯ ಕೈಪಿಡಿ (ಬಜೆಟ್ ಮ್ಯಾನುವಲ್)
7. ಕರ್ನಾಟಕ ಖಜಾನೆ ಸಂಹಿತ (ಕೆಎಫಸಿ)
8. ಸಾದಿಲ್ವಾರು ವೆಚ್ಚ ಕೈಪಿಡಿ (ಎಂಸಿಇ)
9. ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ (ಕೆಸಿಎಸ್ ಕಂಡಕ್ಟ ರೂಲ್ಸ)
10. ಕರ್ನಾಟಕ ಪಾರದರ್ಶಕತೆ ಅಧಿನಿಯಮ- 1999
11. ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ- 1993
12. ಮಾಹಿತಿ ಹಕ್ಕು ಅಧಿನಿಯಮ- 2005
13. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿಗಳು
14. ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿಗಳು
15. ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯ ಮಾರ್ಗಸೂಚಿಗಳು
16. ರಾಜ್ಯ ವಲಯ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು

17. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ
18. ಇಲಾಖಾ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಆಫ ಪವರ್ಸ ಮತ್ತು ವಿಶೇಷ ಡೆಲಿಗೇಷನ್ ಆಫ್ ಪಾವರ್ಸ್
19. ಸರ್ಕಾರದ ಅಧಿಸೂಚನೆಗಳು, ಸುತ್ತೋಲೆಗಳು ಇತ್ಯಾದಿ.
20. ಇಲಾಖೆಯಿಂದ ಹೊರಡಿಸಲಾದ ವಿಶೇಷ ಆದೇಶಗಳು ಮತ್ತು ಸುತ್ತೋಲೆಗಳು

**4(ಬಿ) (VI) ಕಡತ ಶೀರ್ಷಿಕೆ:–**

| ಕ್ರ.ಸಂ. | ಕಡತದ ಶಾಖೆ | | ದಾಖಲೆಗಳ ಉಲ್ಲೇಖ |
|---|---|---|---|
| 1) | ಸಿಬ್ಬಂದಿ ವಿನಿ 1 | EST | ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳ ಶಿಸ್ತು ನಡತೆ ಮತ್ತು ಇತರ ವಿಷಯಗಳು ನ್ಯಾಯಾಲಯದ ಪ್ರಕರಣ, ಸಿಬ್ಬಂದಿಗಳ ಸಂಬಳ ಬಿಲ್ಲು, ಆದಾಯ ಮತ್ತು ಖರ್ಚಿನ ತ:ಖ್ತೆಗಳ ನಿರ್ವಹಣೆ ಇತ್ಯಾದಿ.ಆವಕ ಮತ್ತು ಜಾವಕ ಪುಸ್ತಕ ನಿರ್ವಹಣೆ, ಲೇಖನ ಸಾಮಗ್ರಿ ಹಾಗೂ ದೂರವಾಣಿ ಪುಸ್ತಕಗಳ ನಿರ್ವಹಣೆ ಇತ್ಯಾದಿ. |
| 2) | ಲೆಕ್ಕಶಾಖೆ | Accounts | ರಾಜ್ಯವಲಯ, ಜಿಲ್ಲಾ ಪಂಚಾಯತ್ ಮತ್ತು ಕೇಂದ್ರವಲಯ ಯೋಜನೆಗಳ ಲೆಕ್ಕಪತ್ರ ನಿರ್ವಹಣೆ, ಸಾದಿಲ್ವಾರು ವೆಚ್ಚದ ಬಿಲ್ಲು ಗಳನ್ನು ಪರಿಶೀಲಿಸಿ ಮೇಲುರುಜುವಿಗೆ ಮಂಡಿಸುವದು, ನಗದು ಪುಸ್ತಕ ನಿರ್ವಹಣೆ,ಪ್ರವಾಸ ಭತ್ಯ ಬಿಲ್ಲುಗಳ ನಿರ್ವಹಣೆ ಇತ್ಯಾದಿ. |
| 3) | ಲೆಕ್ಕ ತಪಾಸಣೆ | Audit | ರಾಜ್ಯವಲಯ ಮತ್ತು ಜಿಲ್ಲಾ ಪಂಚಾಯತ್ ಹಾಗೂ ಮಹಾಲೇಖಪಾಲಕರ ಲೆಕ್ಕ ತಪಾಸಣೆ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸುವದು. |
| 4) | ತಾಂತ್ರಿಕ ಶಾಖೆ | TA | ತಾಂತ್ರಿಕ ವಿಭಾಗಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳ ನಿರ್ವಹಣೆ. |

**4(ಬಿ) (VII):– ಪಾಲಸಿಗಳನ್ನು ಮಾಡುವಾಗ ಅಥವಾ ಅನುಷ್ಟಾನಗೊಳಿಸುವ ಸಂಬಂಧದಲ್ಲಿಇರುವ ಏರ್ಪಾಡುಗಳು ಸಾರ್ವಜನಿಕ ಸದಸ್ಯರುಗಳ ಸಹಭಾಗಿತ್ವ ಮುಂತಾದ ವಿವರಗಳು.**

ಅನ್ವಯಿಸುವದಿಲ್ಲ.

**4(ಬಿ) (VIII):– ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ ಸದಸ್ಯರಿಂದ ರಚಿಸಲ್ಪಡುವ ನಿಗಮ, ಕೌನ್ಸಿಲ್ಸ ,ಬೋರ್ಡ್ಸ, ಸಮಿತಿ ಅಥವಾ ಇತರೆ ಬಾಡಿಗಳ**

**ಪಟ್ಟಿ ಹಾಗೂ  ಇಂತಹ ಕಮೀಟಿ ಮತ್ತು ಸಮೀತಿಗಳು ನಡೆಸುವ ಸಭೆ ಮತ್ತು ನಡವಳಿಗಳನ್ನುಸಾರ್ವಜನಿಕರು ವೀಕ್ಷಿಸಬಹುದೇ ಅಥವಾ ಇಂತಹ ಸಭೆಗಳ ನಡವಳಿಗಳನ್ನು  ವೀಕ್ಷಿಸಲು ಸಾರ್ವಜನಿಕರಿಗೆಮುಕ್ತ ಅವಕಾಶವಿದೆಯೇ.:**

ಅನ್ವಯಿಸುವದಿಲ್ಲ.

**4(ಬಿ) (IX):– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,(ಜಿ.ಪಂ) ರಾಮದುರ್ಗ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ದೂರವಾಣಿ ವಿವರಗಳ ಪಟ್ಟಿ**

| ಕ್ರ.ಸಂ | ಹುದ್ದೆ | ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ . ನಿರ್ದೇಶಕರು(ಜಿ.ಪಂ) ರಾಮದುರ್ಗ | ಶ್ರೀ.ಪ್ರಕಾಶ.ಭೀ.ಮುಗಳಖೊಡ (ಪ್ರಭಾರೆ) | 08335–241512 |
| 2 | ಸಹಾಯಕ ತೋಟಗಾರಿಕೆ ಅಧಿಕಾರಿ/ತಾಂತ್ರಿಕ ಸಹಾಯಕರು | ಶ್ರೀ.ಪ್ರಕಾಶ.ಭೀ.ಮುಗಳಖೊಡ | 08335–241512 |
| 3 | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ. ಸುರೇಬಾನ | ಶ್ರೀ.ಅನೀಲ ರಾಠೋಡ | 08335–241512 |
| 4 | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ. ಮುದಕವಿ | ಶ್ರೀ.ಸಂತೋಷ ಏಖ್ಖಳೇಕರ | 08335–241512 |
| 5 | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ. ಕೆ. ಚಂದರಗಿ | ಶ್ರೀ.ಶಿವಾನಂದ ಕೊಪ್ಪದ | 08335–241512 |
| 6 | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ. ಕಟಕೋಳ | ಶ್ರೀ. ವಿಠ್ಠಲ ಗೌಡಿ | 08335–241512 |
| 7 | ಪ್ರಥಮ ದರ್ಜೆ ಸಹಾಯಕರು | ಶ್ರೀಮಕ್ತುಮಸಾಬ ಹಂಪಿಹೊಳಿ | 08335–241512 |
| 8 | ತೋಟಗಾರಿಕೆ ಸಹಾಯಕರು | ಶ್ರೀ.ನಿಂಗಪ್ಪ ಬನ್ನೂರ | 08335–241512 |
| 9 | ತೋಟಗಾರಿಕೆ ಸಹಾಯಕರು | ಶ್ರೀ.ಮಹಾದೇವಪ್ಪ ಬೆಳವಣಕಿ | 08335–241512 |
| 10 | ತೋಟಗಾರಿಕೆ ಸಹಾಯಕರು | ಕು.ಪಾರ್ವತಿ ಮೇಟಿ | 08335–241512 |
| 11 | ತೋಟಗಾರರು | ಶ್ರೀ ಬಸಲಿಂಗಪ್ಪ ಮೇಟಿ | 08335–241512 |
| 12 | ತೋಟಗಾರರು | ಶ್ರೀ.ಮುಬಾರಕ ಪನಾಲಗಡ | 08335–241512 |
| 13 | ತೋಟಗಾರಿಕೆ ಸಹಾಯಕರು | ಖಾಲಿ ಹುದ್ದೆ | 08335–241512 |
| 14 | ತೋಟಗಾರರು | ಖಾಲಿ ಹುದ್ದೆ | 08335–241512 |

**4(ಬಿ) (X):– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,(ಜಿ.ಪಂ) ರಾಮದುರ್ಗ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ 2016–17ನೇ ಸಾಲಿನ ವೇತನದ ವಿವರಗಳ ಪಟ್ಟಿ.**

| ಕ್ರ.ಸಂ | ಹುದ್ದೆ | ಹೆಸರು | ವೇತನ ಶ್ರೇಣಿ (ರೂ.ಗಳಲ್ಲಿ) |
|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ . ನಿರ್ದೇಶಕರು(ಜಿ.ಪಂ) ರಾಮದುರ್ಗ | ಶ್ರೀ.ಪ್ರಕಾಶ.ಭೀ.ಮುಗಳಖೊಡ (ಪ್ರಭಾರೆ) | 21600–40050 |
| 2 | ಸಹಾಯಕ ತೋಟಗಾರಿಕೆ ಅಧಿಕಾರಿ/ತಾಂತ್ರಿಕ ಸಹಾಯಕರು | ಶ್ರೀ.ಪ್ರಕಾಶ.ಭೀ.ಮುಗಳಖೊಡ | 21600–40050 |
| 3 | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ. ಸುರೇಬಾನ | ಶ್ರೀ.ಅನೀಲ ರಾಠೋಡ | 21600–40050 |
| 4 | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ. ಮುದಕವಿ | ಶ್ರೀ.ಸಂತೋಷ ಏಖ್ಖಳೇಕರ | 21600–40050 |
| 5 | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ. ಕೆ. ಚಂದರಗಿ | ಶ್ರೀ.ಶಿವಾನಂದ ಕೊಪ್ಪದ | 21600–40050 |
| 6 | ಸಹಾಯಕ ತೋಟಗಾರಿಕೆ ಅಧಿಕಾರಿ ರೈ.ಸಂ.ಕೇ. ಕಟಕೋಳ | ಶ್ರೀ. ವಿಠ್ಠಲ ಗೌಡಿ | 21600–40050 |
| 7 | ಪ್ರಥಮ ದರ್ಜೆ ಸಹಾಯಕರು | ಶ್ರೀ ಮಕ್ತುಮಸಾಬ ಹಂಪಿಹೊಳಿ | 14550–26700 |
| 8 | ತೋಟಗಾರಿಕೆ ಸಹಾಯಕರು | ಶ್ರೀ.ನಿಂಗಪ್ಪ ಬನ್ನೂರ | 12500–24000 |
| 9 | ತೋಟಗಾರಿಕೆ ಸಹಾಯಕರು | ಶ್ರೀ.ಮಹಾದೇವಪ್ಪ ಬೆಳವಣಕಿ | 11000–19000 |
| 10 | ತೋಟಗಾರಿಕೆ ಸಹಾಯಕರು | ಕು.ಪಾರ್ವತಿ ಮೇಟಿ | 12500–24000 |
| 11 | ತೋಟಗಾರರು | ಶ್ರೀ ಬಸಲಿಂಗಪ್ಪ ಮೇಟಿ | 10400–16400 |
| 12 | ತೋಟಗಾರರು | ಶ್ರೀ.ಮುಬಾರಕ ಪನಾಲಗಡ | 9600–14550 |
| 13 | ತೋಟಗಾರಿಕೆ ಸಹಾಯಕರು | ಖಾಲಿ ಹುದ್ದೆ | |
| 14 | ತೋಟಗಾರರು | ಖಾಲಿ ಹುದ್ದೆ | |

**4(ಬಿ) (XI): ಆಯವ್ಯಯ ವಿತರಣೆ: ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನ ಮತ್ತು ಇತರ ಭತ್ಯೆಗಾಗಿ ಬಿಡುಗಡೆಯಾದ ಅನುದಾನದ ವಿವರ. (ಲೆಕ್ಕ ಶೀರ್ಷಿಕೆ: 2435-00-101-0-26)**

| ಕ್ರ. ಸಂ | ಕಾರ್ಯಾಲಯದ ಹೆಸರು | ಲೆಕ್ಕಶೀರ್ಷಿಕೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1) | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿ.ಪಂ) ರಾಮದುರ್ಗ | 2435-(ಯೋಜನೇತರ)<br>2401-(ಯೋಜನೆ).<br>2225(ಯೋಜನೆ)<br>2401(ಯೋಜನೆ)NHM | 0.50 |

**4(ಬಿ) (XII):- ಸಹಾಯಧನದೊಂದಿಗೆ ನಡೆಸುವ ಯೋಜನೆಗಳು ಅಂತಹ ಯೋಜನೆಗಳ ಫಲಾನುಭವಿಗಳ ವಿವರ ಮತ್ತು ಮಂಜೂರಾದ ಹಣ. ರಾಜ್ಯ ವಲಯ ಯೋಜನೆಗಳು**

| ಕ್ರ. ಸಂ. | ಯೋಜನೆಯ ಹೆಸರು | ವಾರ್ಷಿಕ ಗುರಿ | |
|---|---|---|---|
| | | ಆರ್ಥಿಕ ಗುರಿ | ಭೌತಿಕ ಗುರಿ |
| | **ಕೇಂದ್ರ ನೆರವಿನ ಯೋಜನೆಗಳು** | | |
| 1 | D-04 ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ) (2401-00-108-2-30) | 25.84 | 51.68 |
| 2 | D-12 ರಾಷ್ಟ್ರೀಯ ತೋಟಗಾರಿಕೆ ಮಿಷನ್ (2401-00-119-4-06) | 58.47 | 65.00 |
| 3 | D-17 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2401-00-800-1-57 | 10.17 | 73.00 |
| | **ರಾಜ್ಯವಲಯ ಯೋಜನೆಗಳು** | | |

| | | | |
|---|---|---|---|
| 1 | D–01ನಿರ್ದೇಶನ ಮತ್ತು ಆಡಳಿತ | 0.44 | 5 |
| 2 | D–02 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ 2401–00–001–2–10 | 0 | 0 |
| 3 | D–10 ಸಮಗ್ರ ತೋಟಗಾರಿಕಾ ಅಭಿವೃದ್ದಿ (2401–00–111–0–08) | 9.83 | 11 |
| 4 | D–14 ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ದಿ (2401–00–119–5–01 | 0.057 | 2 |
| 5 | D–15 ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ (2401–00–119–5–02) | 0.51 | 26 |
| 6 | D–24 ಕೃಷಿಭಾಗ್ಯ ಯೋಜನೆ 2401–00–800–2–48 | 15.15 | 2.00 |
| | **ಜಿಲ್ಲಾವಲಯ ಯೋಜನೆಗಳು** | | |
| 1 | ಆ–02 ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ (2435–00–101–0–28) | 5.67 | 12 |
| 2 | ಆ–06 ಪ್ರಚಾರ ಮತ್ತು ಸಾಹಿತ್ಯ (2435–00–101–0–38) | 0 | 0 |
| 3 | ಆ–03 ತೋಟಗಾರಿಕೆ ಕಟ್ಟಡಗಳು (2435–00–101–0–32) | 2.00 | 1.00 |
| 4 | ಆ–04 ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ(2435–00–101–0–35) | 1.00 | 1.00 |
| 5 | ಆ–05 ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ (2435–00–101–0–36) | 0.11 | 6800 |
| 6 | ಆ–09 ರೈತರಿಗೆ ಸಹಾಯ (2435–00–101–0–62) | 0.29 | 20.00 |
| 7 | ಆ–10 ರೈತರಿಗೆ ತರಬೇತಿ (2435–00–101–0–64) | 0.08 | 45.00 |
| | ಒಟ್ಟು | 129.617 | 7114.68 |

<u>ರಾಷ್ಟ್ರೀಯ ತೋಟಗಾರಿಕೆ ಮಿಷನ್/ ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ /ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ/ ರಾಷ್ಟ್ರೀಯ ಸಾವಯವ ಕೃಷಿ ಯೋಜನೆ</u>

| ಕ್ರ. ಸಂ. | ಯೋಜನೆಯ ಹೆಸರು | ವಾರ್ಷಿಕ ಗುರಿ | |
|---|---|---|---|
| | | ಆರ್ಥಿಕ ಗುರಿ | ಭೌತಿಕ ಗುರಿ |
| 1 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | 58.47 | 65.00 |
| 2 | ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ | 0 | 0 |
| 3 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 10.17 | 73.00 |
| | **ಒಟ್ಟು** | **68.64** | **138.00** |

**4(ಬಿ)(XIII):– ಇಲಾಖೆಯಿಂದ ಅಥರೈಜೇಷನ್ ಮಂಜೂರಾದ ಅಥವಾ ಪರವಾನಗಿ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯಂಟ್ಸಗಳ ವಿವರಗಳು.**

**4(ಬಿ)(XIV):– ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಲಭ್ಯವಿರುವ ಮಾಹಿತಿಯ ವಿವರ, ದೊರಕುವಿಕೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ.:**

**4(ಬಿ)(XV):– ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶಗಳ ವಿವರಗಳು ಗಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು, ಸಾರ್ವಜನಿಕರ ಉಪಯೋಗಕ್ಕಾಗಿ ತೆರೆದಿದ್ದಾರೆ.:**

ಸಾರ್ವಜನಿಕರ ಉಪಯೋಗಕ್ಕೆ ತೋಟದ ಬೆಳೆಗಳ/ತರಕಾರಿ ಇತ್ಯಾದಿ ತೋಟಗಾರಿಕೆ ಬೆಳೆಗಳ ನಿರ್ವಹಣೆ ಹಾಗೂ ನಿರ್ದೇಶನಾಲಯದಿಂದ ಬಂದಂತಹ ಕರಪತ್ರಗಳನ್ನು ಸೂಚನಾ ಫಲಕದ ಮೇಲೆ ಪ್ರದರ್ಶಿಸಲಾಗಿದ್ದು, ಇಚ್ಚೆಯುಳ್ಳ ರೈತರಿಗೆ ಕರಪತ್ರ ಹಾಗೂ ಮುದ್ರಿತ ಹೊತ್ತಿಗೆಗಳನ್ನು ನೀಡಲಾಗುತ್ತಿದೆ. ಉಳಿದಂತೆ ಗ್ರಂಥಾಲಯ ವ್ಯವಸ್ಥೆ ಇರುವದಿಲ್ಲ.

**4(ಬಿ)(XVI) ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು,ಪದನಾಮ ಮತ್ತು ಇತರೆ ವಿವರಗಳು.**

| | |
|---|---|
| ಶ್ರೀ ಪ್ರಕಾಶ ಮುಗಳಖೊಡ (ಪ್ರಭಾರೆ) | ಶ್ರೀ .ಐ ಕೆ ದೊಡಮನಿ |
| ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ತೋಟಗಾರಿಕೆ ಉಪನಿರ್ದೇಶಕರು,(ಜಿ.ಪಂ), |
| (ಜಿ.ಪಂ.) | ಬೆಳಗಾವಿ. |
| ರಾಮದುರ್ಗ ತಾ//ರಾಮದುರ್ಗ | ದೂರವಾಣಿ:2407296. |
| ದೂರವಾಣಿ– 08335–241512 | (ಸೆಕ್ಷನ್ 5(1) ಪ್ರಕಾರ ಮಾಹಿತಿ ಅಧಿಕಾರಿ). |

**(ಬಿ)(XVII):– ನಿಗದಿಪಡಿಸಲಾದ ಇತರ ವಿಷಯಗಳು:** ಯಾವುದೂ ಇಲ್ಲ.

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು**
**(ಜಿ.ಪಂ) ರಾಮದುರ್ಗ**